**<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕುಂದಾಪುರ</u>**

**ಅಸಲು ದಾವೆ ಸಂಖ್ಯೆಃ349/2017** **ಪಿ.ಡಬ್ಲ್ಯೂ-1**

ದಿನಾಂಕಃ 21-10-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಟಿ.ಬಿ.ಎಸ್ ರವರಿಂದ</u>

ದಾವಾ ಆಸ್ತಿ ನನ್ನ ಅಜ್ಜಿಯ ಗೇಣಿ ಭೂಮಿ. ಅವರು ಸ್ವತಃ ಡಿಕ್ಲರೇಶನ್ ಅರ್ಜಿಯನ್ನು ಸಲ್ಲಿಸಿರುತ್ತಾರೆ ಮತ್ತು ಅಜ್ಜಿಯ ಹೆಸರಿಗೆ ಆಸ್ತಿ ಮಂಜೂರಾಗಿರುತ್ತದೆ. ಅಜ್ಜಿ ಸ್ವತಹಾ ಗೇಣಿ ಮಾಡಿಕೊಂಡಿದ್ದರು. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಭೂನ್ಯಾಯಮಂಡಳಿಯಿಂದ ನನ್ನ ಅಜ್ಜಿಗೆ ಮಂಜೂರಾದ ಆಸ್ತಿಯನ್ನು ನನ್ನ ಅಜ್ಜಿಯ ಮಕ್ಕಳೆಲ್ಲರೂ ಸೇರಿ ವಿಭಾಗ ಮಾಡಿಕೊಂಡಿದ್ದಾರೆ. ನನ್ನ ಅಜ್ಜಿಗೆ 4 ಜನ ಮಕ್ಕಳು. ಅವರ ಹೆಸರು ನಾಗಮ್ಮ, ತುಂಗಮ್ಮ, ಮಹಾಬಲ ಭಂಡಾರಿ, ಶೀನ ಭಂಡಾರಿ, ಕಾವೇರಿ ಮತ್ತು ಪುಟ್ಟು. ಸದರಿ ಪಾಲುಪಟ್ಟಿಯನ್ನು ನನ್ನ ಅಜ್ಜಿಯ ಮಕ್ಕಳು ಮಾತ್ರ ಸೇರಿ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ. ಅವರ ಮೊಮ್ಮಕ್ಕಳು ವಿಭಾಗ ಪತ್ರದಲ್ಲಿ ಪಕ್ಷಗಾರರಾಗಿರುವುದಿಲ್ಲ. ಸದರಿ ವಿಭಾಗ ಪತ್ರದಲ್ಲಿ ಒಟ್ಟು 6 ಪಾಲಾಗಿದೆ. ಸದರಿ ವಿಭಾಗ ಪತ್ರದಲ್ಲಿ ಹೆಣ್ಣು ಮಕ್ಕಳ ಮಕ್ಕಳು ಸೇರಿರುವುದಿಲ್ಲ ಎಂದರೆ ಸರಿ .

ನಾನು ಸಾಗರ ತಾಲೂಕಿನ ಆಡದಂಗಡಿಯಲ್ಲಿ ವಾಸ್ತವ್ಯ ಇದ್ದೇನೆ. ಸುಮಾರು 30 ವರ್ಷಗಳಿಂದ ನಾನು, ನನ್ನ ತಾಯಿ ಎಲ್ಲರೂ ಅಲ್ಲೇ ವಾಸ್ತವ್ಯ ಇದ್ದೇವೆ. ಕನ್ಯಾನದಲ್ಲಿ ವಾಸ್ತವ್ಯ ಇಲ್ಲ. ಆದರೆ ಸಾಗುವಳಿ ಮಾಡುತ್ತಿದ್ದೇವೆ. ಸಾಗರದಲ್ಲಿ ನಮಗೆ ಜಮೀನು ಇದೆ. ಸದರಿ ಆಸ್ತಿ ಕೂಡಾ ನಮ್ಮ ಒಳಗೆ ಪಾಲಾಗಿದೆ.

ನನ್ನ ತಾಯಿ ಅವರ ಅಸ್ತಿಯನ್ನು ಲೋಲಾಕ್ಷಿಯವರಿಗೆ ವ್ಯವಸ್ಥಾಪತ್ರ ಮಾಡಿಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ನನ್ನ ತಾಯಿ ಬರೆದುಕೊಟ್ಟ ದಿನ ನನಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. 2011 ನೇ ಇಸವಿಯಲ್ಲಿ ನನ್ನ ತಾಯಿ ವ್ಯವಸ್ಥಾಪತ್ರ ಬರೆದುಕೊಟ್ಟ ವಿಚಾರ ಗೊತ್ತಾಗಿದೆ.

ನನ್ನ ತಾಯಿಗೆ 5 ಜನ ಮಕ್ಕಳು. ಅವರ ಹೆಸರು ರಾಘು ಭಂಡಾರಿ, ರಾಜೀವಿ, ಲೋಲಾಕ್ಷಿ,

ಸುಜಾತ. ಸುಜಾತಳಿಗೆ ಎರಡು ಜನ ಮಕ್ಕಳು. ಅವರ ಹೆಸರು ಶಶಿಧರ ಮತ್ತು ಅಶ್ವಿತ ಎಂದರೆ ಸರಿ. ರಾಜೀವಿಗೆ ಎರಡು ಜನ ಮಕ್ಕಳು. ಅವರ ಹೆಸರು ಮಂಜುನಾಥ ಮತ್ತು ಸುಮಿತ್ರ. ಸುಮಿತ್ರಳಿಗೆ ಇಬ್ಬರು ಮಕ್ಕಳು ಎಂದರೆ ಸರಿ . ಅವರ ಹೆಸರು ರಾಧಿಕಾ ಮತ್ತು ರಮ್ಯ ಎಂದರೆ ಸರಿ. ಲೋಲಾಕ್ಷಿಯವರಿಗೆ 4 ಜನ ಮಕ್ಕಳು. ಅವರ ಹೆಸರು ಪ್ರವೀಣ್, ಪ್ರದೀಪ, ಪ್ರಶಾಂತ್ ಮತ್ತು ಪವಿತ್ರ. ಪವಿತ್ರರವರಿಗೆ ಇಬ್ಬರು ಮಕ್ಕಳು. ಭರತ್ ಮತ್ತು ಚೈತಾನ್ಯ. ಮೇಲೆ ಹೇಳಿದವರನ್ನು ಈ ದಾವೆಯಲ್ಲಿ ವಾದಿ ಅಥವಾ ಪ್ರತಿವಾದಿಯರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ .

ದಾವಾ ಆಸ್ತಿ ಅಳಿಯಸಂತಾನ ಕುಟುಂಬದ ಆಸ್ತಿ ಅಲ್ಲ ಮತ್ತು ನನ್ನ ಅಜ್ಜ ಮತ್ತು ಅಜ್ಜಿ ಸ್ವತಹಾ ಗೇಣಿ ಮಾಡಿಕೊಂಡಿದ್ದ ಆಸ್ತಿ ಎಂದರೆ ಸರಿಯಲ್ಲ. ಅಜ್ಜಿ ತೀರಿಹೋದ ನಂತರ ಮಕ್ಕಳೆಲ್ಲರೂ ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ನನಗೆ ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸಾಗರದಲ್ಲಿ ವಾಸ್ತವ್ಯ ಇರುವ ಕಾರಣ ನನ್ನ ಅಜ್ಜಿ 2 ನೇ ಪ್ರತಿವಾದಿಗೆ ವ್ಯವಸ್ಥಾಪತ್ರ ಬರೆದುಕೊಟ್ಟಿದ್ದಾರೆಂದರೆ ಸರಿ .

<u>ಮರು ವಿಚಾರಣೆಃ</u> ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ